KARNATAKA NURSING & PARAMEDICAL SCIENCES EDUCATION (REGULATION) AUTHORITY

**Karnataka State Diploma In Nursing Examination Board**

First Floor, Library Block, BMC&RI Campus, K.R.Road, Bengaluru-560002

**Ph No**: 080-26700074, 26700075 **Email**: ksdneb@gmail.com

**KSDNEB/ Est/ 32 /2019-20** **Date: 18.02.2021**

<u>ಎಲ್ಲಾ ಶುಶ್ರೂಷಾ ಶಾಲೆಯ ಪ್ರಾಂಶುಪಾಲರಿಗೆ</u>

ವಿಷಯ: ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಮಾಹಿತಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಎಸ್.ಎಸ್.ಪಿ ಪೋರ್ಟ್‌ಲ್ ವತಿಯಿಂದ ಬಂದ ಇ-ಮೇಲ್ ದಿನಾಂಕ: 17.02.2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಎಸ್.ಎಸ್.ಪಿ ವತಿಯಿಂದ ಮಾಹಿತಿ ಕೇಳಿರುತ್ತಾರೆ. ಕಳೆದ ಭಾರಿ ಕಾಲೇಜಿನ ಶುಲ್ಕದ ವಿವರ ಕಳುಹಿಸಿದ್ದು, ಈಗ ಎಸ್.ಎಸ್.ಪಿ ಪೋರ್ಟ್‌ಲ್‌ನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ (ದ್ವಿತೀಯ ಹಾಗೂ ತೃತೀಯ ವರ್ಷದ) ಸಂಪೂರ್ಣ ವಿವರವನ್ನು ಈ ಪತ್ರಕ್ಕೆ ಲಗತ್ತಿಸಿರುವ Excel Sheet ನ ಮಾದರಿಯಲ್ಲಿ ದಿನಾಂಕ: 28.02.2021 ರೊಳಗೆ ಮಂಡಳಿಯ ಇ-ಮೇಲ್ (ksdneb@gmail.com) ಗೆ ಕಳುಹಿಸಲು ಈ ಪತ್ರದ ಮೂಲಕ ತಿಳಿಸಲಾಗಿದ್ದು ಹಾಗು ವಿವರ ಕಳುಹಿಸುವ ಸಮಯದಲ್ಲಿ ಒಂದು ವೇಳೆ ವಿದ್ಯಾರ್ಥಿಯ ಮಾಹಿತಿ ಬಿಟ್ಟು ಹೋಗಿದಲ್ಲಿ ಅಥವಾ ಮಾಹಿತಿ ತಪ್ಪಾಗಿದಲ್ಲಿ ಸಂಬಂಧಪಟ್ಟ ಶುಶ್ರೂಷಾ ಶಾಲೆಯವರೇ ಜವಾಬ್ದಾರರಾಗಿರುತ್ತಾರೆ.

ಮುಂದುವರೆದು, ಶುಶ್ರೂಷಾ ಶಾಲೆಯವರು ತಮ್ಮ ಶಾಲೆಯ ಲೆಟರ್‌ಹೆಡ್‌ನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಸಲ್ಲಿಸಿರುವ ಮಾಹಿತಿಯು ನೈಜವಾಗಿರುತ್ತದೆಂದು, ಇಲ್ಲವಾದಲ್ಲಿ ನಾವೇ ಜವಾಬ್ದಾರರಾಗಿರುತ್ತೇವೆ ಎಂದು ಬರೆದು ಪ್ರಾಂಶುಪಾಲರು ಸಹಿ ಮಾಡಿ ಮುಚ್ಚಳಿಗೆ ಪತ್ರ Excel Sheet ನ ಜೊತೆ ಸಲ್ಲಿಸುವಂತೆ ತಿಳಿಸಲಾಗಿದೆ.

ಕಾರ್ಯದರ್ಶಿಗಳು

ಕ.ರಾ.ಶು.ಪ.ಮಂ, ಬೆಂಗಳೂರು.

18/02/2021

ಪ್ರತಿಯನ್ನು ಇವರ ಮಾಹಿತಿಗಾಗಿ ಸಲ್ಲಿಸಿದೆ.

ನಿರ್ದೇಶಕರು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು